ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	145
2)	ಮಾನ್ಯ ಸದಸ್ಯರ ಹೆಸರು	ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3)	ಉತ್ತರಿಸಬೇಕಾದ ದಿನಾಂಕ	13-12-2021
4)	ಉತ್ತರಿಸುವವರು	ಮಾನ್ಯ ಉನ್ನತ ಶಿಕ್ಷಣ, ಐಟಿ/ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃಧ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

ಪ್ರಶ್ನೆ	ಉತ್ತರ
(ಅ) ಹಿಂದೆ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ನೌಕರರನ್ನು ಮತ್ತು ಅದರ ಆಸ್ತಿಗಳನ್ನು ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಇಲಾಖೆಗೆ ಯಾವಾಗ ವರ್ಗಾಯಿಸಲಾಗಿದೆ: ಈ ನೌಕರರು ಯಾವ ಯಾವ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ;	ಕೌಶಲ್ಯಾಬಿವೃದ್ಧಿ, ಉದ್ಯಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಬರುವ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮಕ್ಕೆ ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 145 ಉಜೀಇ 2017 ದಿನಾಂಕ:06.12.2017 ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಇಡಿ 103 ಪಿಟಿಐ 2017 ದಿನಾಂಕ:11.09.2017 ರನ್ವಯ 16 ವಿದ್ಯಾಪೀಠಗಳ ಸ್ಥಿರ ಮತ್ತು ಚರಾಸ್ಥಿಗಳು ಹಾಗೂ ವಿಸರ್ಜಿತ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ, 36 ಸಿಬ್ಬಂದಿಗಳೊಂದಿಗೆ ವರ್ಗಾಯಿಸಲಾಗಿದೆ. ಈ ರೀತಿ ವರ್ಗಾಯಿಸಿರುವ ನೌಕರರು ನಿಗಮದ ಕೇಂದ್ರ ಕಛೇರಿ ಹಾಗೂ ವಿವಿಧ ಜಿಲ್ಲೆಗಳ ವಿದ್ಯಾಪೀಠಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
(ಆ) ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಎಷ್ಟು ನೌಕರರು ಇನ್ನೂ ಸೇವೆಯಲ್ಲಿ ಮುಂದುವರೆದಿದ್ದಾರೆ; ಎಷ್ಟು ಜನ ನಿವೃತ್ತರಾಗಿದ್ದಾರೆ;	ವಯಸ್ಕರ ಶಿಕ್ಷಣ ಸಮಿತಿಯ ಮೂಲಕ ಈ ಇಲಾಖೆಗೆ ಹಸ್ತಾಂತರಿಸಲಾದ 36 ನೌಕರರ ಪೈಕಿ 09 ನೌಕರರು ಪ್ರಸ್ತುತ ಸೇವೆಯಲ್ಲಿ ಮುಂದುವರೆದಿರುತ್ತಾರೆ. 27ನೌಕರರು ನಿವೃತ್ತರಾಗಿರುತ್ತಾರೆ.
(ಇ) ಈ ನೌಕರರಲ್ಲಿ ಯಾರಾದರೂ ಅಕ್ರಮವೆಸಗಿ ವಿಚಾರಣೆ ಎದುರಿಸಿದ್ದಾರೆಯೇ; ನ್ಯಾಯಾಲಯಕ್ಕೆ ಹೋಗಿ ಆದೇಶವೇನಾದರೂ ಆಗಿದೆಯೇ; ಎಷ್ಟು ನೌಕರರ ಮೇಲೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ?	ಈ ಇಲಾಖೆಗೆ ವರ್ಗಾಯಿಸಲಾದ 36 ನೌಕರರುಗಳ ವಿರುದ್ಧ ಅಕ್ರಮವೆಸಗಿದ ಮತ್ತು ನ್ಯಾಯಾಲಯದ ಯಾವುದೇ ಪ್ರಕರಣಗಳು ಇರುವುದಿಲ್ಲ.

ಸಂಖ್ಯೆ: ಕೌಉಜೀಇ 66 ಉಜೀಪ್ರ 2021

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ದಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.